ನೋಡಿದರೆ ಸಂಗೀತದಲ್ಲಿ ಘರಾಣೆಗಳು ಹುಟ್ಟಿದ್ದು ಮೊಘಲರ ಕಾಲದಲ್ಲಿ. ಅಕ್ಬರನ ಕಾಲದಲ್ಲೂ ಸಂಗೀತ ರಾಜಾಶ್ರಯ ಪಡೆದಿತ್ತು. ಸಂಗೀತ ಆಧ್ಯಾತ್ಮಿಕ, ಭಾವನಾತ್ಮಕ, ಕಲಾತ್ಮಕ ಹಾಗೂ ಶೃಂಗಾರಾತ್ಮಕವಾಗಿ ಹೊಮ್ಮಿತು.

◆ **ಸಂಗೀತ ಸಂಸ್ಕೃತಿಯ ಅವಿಭಾಜ್ಯ ಅಂಗ ಎಂದಿರಿ. ಹೇಗೆ?**

ಸಂಗೀತ ಸಂಸ್ಕೃತಿಯ ಅವಿಭಾಜ್ಯ ಅಂಗ. ಇಲ್ಲಿ ಹಿಂದೂ–ಮುಸ್ಲಿಂ ಸಮನ್ವಯತೆ ಇದೆ. ಇಂದಿನ ಸಂಗೀತಗಾರರನ್ನೇ ತೆಗೆದುಕೊಂಡರೆ ದಾಸಸಾಹಿತ್ಯವನ್ನು ಪ್ರಚಾರಗೊಳಿಸುವಲ್ಲಿ ನಾನು ಸೇರಿದಂತೆ ಹುಸೇನ್ ಸಾಬ್ ಕನಕಗಿರಿ ಅವರ ಕೊಡುಗೆಯೂ ಬಹಳಷ್ಟಿದೆ. ಸ್ವಲ್ಪ ಹಿಂದಕ್ಕೆ ಹೋದರೆ ಗದಗದ ಗುರು ಗೋವಿಂದ ಭಟ್ಟರು ಸಂತ ಶಿಶುನಾಳ ಶರೀಫರನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಸಂಗೀತ ಕಲಿಸಿದ್ದರು. ಸಂಗೀತಕ್ಕೆ ಖಾನ್ ಪರಂಪರೆ ಕೊಡುಗೆ ಬಹಳ ದೊಡ್ಡದು. ಅಲ್ಲಾವುದ್ದೀನ್ ಬಾಬ ಅವರ ಮಗಳು ಅನ್ನಪೂರ್ಣಾದೇವಿ ಅವರ ಮೂಲ ಹೆಸರು ಮದೀನಾ ಬೇಗಂ. ಅವರು ಸಿತಾರ್, ಸುರ್‌ಬಹಾರ್‌ಗಳನ್ನು ನುಡಿಸುತ್ತಿದ್ದರು. ಬಾನ್ಸುರಿ ವಾದಕ ಪಂ. ಹರಿಪ್ರಸಾದ್ ಚೌರಾಸಿಯ ಅವರು ಅನ್ನಪೂರ್ಣಾದೇವಿ ಅವರ ಬಳಿ ಕಲಿತವರು. ಪರ್ವೀನ್ ಸುಲ್ತಾನ್ ಅವರ ಪತಿ ದಿಲ್‌ಶಾದ್ ಬುದ್ಧದೇವದಾಸ್ ಗುಪ್ತಾ ಅವರ ಸಹೋದರ. ಪರ್ವೀನ್ ಅವರನ್ನು ಮದುವೆಯಾಗುವ ಸಲುವಾಗಿ ಅವರು ಮುಸ್ಲಿಂ ಧರ್ಮಕ್ಕೆ ಮತಾಂತರ ಹೊಂದಿದರು.

ಬಹುತೇಕ ಎಲ್ಲ ಮುಸ್ಲಿಂ ಕಲಾವಿದರೂ ದಾಸವಾಣಿ, ದೇವರನಾಮ, ಭಜನ್ಸ್, ಅಭಂಗ್, ವಚನ, ಸೂರ್‌ದಾಸ್, ಕಬೀರ್, ತುಳಸಿದಾಸ್, ಮೀರಾಬಾಯಿ ಅವರ ಭಜನ್ಸ್‌ಗಳನ್ನು ಹಾಡುತ್ತಾರೆ. ನನ್ನನ್ನೂ ಸೇರಿ ಎಲ್ಲ ಮುಸ್ಲಿಂ ಸಂಗೀತಗಾರರು ದೇವರನಾಮವನ್ನು ಭಾವಪೂರ್ಣವಾಗಿ ಹಾಡುತ್ತಿಲ್ಲವೇ? ಇಲ್ಲಿ ಜಾತಿ, ಧರ್ಮ ಬರುವುದಿಲ್ಲ. ಶ್ರುತಿ, ಲಯ, ಸ್ವರ, ದೇವರಧ್ಯಾನ, ಸಂಗೀತದಲ್ಲಿ ತಲ್ಲೀನರಾಗಿ ಕೇಳುಗರಿಗೆ ಸದಭಿರುಚಿ ಹುಟ್ಟಿಸುವುದು ಅಷ್ಟೇ ಮುಖ್ಯವಾಗುತ್ತದೆ.

ಮುಸ್ಲಿಂ ಕಲಾವಿದರು ಕವ್ವಾಲಿ, ಗಜಲ್‌ಗಳನ್ನೂ ಹಾಡುತ್ತಿದ್ದರು. ಅಂತೆಯೇ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನೂ ಶ್ರೀಮಂತಗೊಳಿಸಿದರು. ಇಂದಿನ ಸಮಕಾಲೀನ ಸಂಗೀತವನ್ನೂ ತೆಗೆದುಕೊಂಡರೆ ಉತ್ತರ ಭಾರತದಲ್ಲಿ ಮುಸ್ಲಿಂ ಕಲಾವಿದರೂ ಹೆಚ್ಚು, ಕಲಿಯುವ ಮಕ್ಕಳೂ ಹೆಚ್ಚು ಇದ್ದಾರೆ. ಲಖನ್, ಕೋಲ್ಕತ್ತ, ದೆಹಲಿ, ಬನಾರಸ್‌ಗಳಲ್ಲಿ ಸಾಕಷ್ಟು ಮಕ್ಕಳು ಅಭಿಲಾಷೆ, ಆಸಕ್ತಿ ತೋರಿಸುತ್ತಿದ್ದಾರೆ.

◆ **ನಿಮ್ಮ ಕುಟುಂಬ ತಲೆಮಾರುಗಳಿಂದ ಸಂಗೀತ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದದ್ದು ಹೇಗೆ?**

ನಮ್ಮ ಕುಟುಂಬವೂ ತಲತಲಾಂತರದಿಂದ ಸಂಗೀತ, ಸಾರಂಗಿ ಉಳಿಸಿ ಬೆಳೆಸಿಕೊಂಡು ಬಂದಿದೆ. ಹೀಗೆ ಪರಂಪರೆಯಿಂದ ಬಂದ ಸಂಗೀತ ಭದ್ರವಾಗಿ ನೆಲೆಯೂರಿದೆ. ಹಿಂದಿನ ಕಾಲದಲ್ಲಿ ಸಂಗೀತ ಬಹಳ ಕಷ್ಟದ್ದು, ಉಪಯೋಗ ಇಲ್ಲದ್ದು ಎಂಬ ಭಾವನೆ ಇತ್ತು. ಅದರಲ್ಲಿನ ಆಧ್ಯಾತ್ಮಿಕತೆ ಗೊತ್ತಿರಲಿಲ್ಲ. ಆ ಸಮಯದಲ್ಲಿ ನಮ್ಮ ಪೂರ್ವಜರು ಸಂಗೀತವನ್ನು ಕಟ್ಟಿ ಬೆಳೆಸಿದರು. ಇಲ್ಲಿಯವರೆಗೂ ಅದನ್ನು ನಾವು ಉಳಿಸಿ ಮುಂದಿನ ಪೀಳಿಗೆಗೆ ಉಳಿಸುವ ಪ್ರಯತ್ನವನ್ನೂ ಮಾಡುತ್ತಿದ್ದೇವೆ. ಬಡತನ ಇದ್ದರೂ ಸಂಗೀತ ಬಿಡಲಿಲ್ಲ. ಈಗಿನ ಪೀಳಿಗೆಯವರಿಗೆ ಎಂಜಿನಿಯರ್ ಆಗಬೇಕು, ಡಾಕ್ಟರ್ ಆಗಬೇಕು ಎಂಬ ಅಭಿಲಾಷೆ ಇದೆಯೇ ಹೊರತು ಶಾಸ್ತ್ರೀಯ ಸಂಗೀತವನ್ನು ಉಳಿಸಿ ಬೆಳೆಸುವ ಬಗ್ಗೆ ಆಸಕ್ತಿ ಉಳಿದಿಲ್ಲ.